ಭೋರ್ಗರೆಯುತ್ತ ಓಡುವ ನದಿಗಳು... ಅಬ್ಬಬ್ಬಾ... ಮಳೆಗಾಲ ಶುರುವಾಯಿತೆಂದರೆ ಕಾಡುಗಳು ಮತ್ತಷ್ಟು ಸೊಕ್ಕಿನಿಂದ ಮೆರೆಯುತ್ತಿದ್ದವು. ಬೆಟ್ಟಗಳು ತರಾವಳಿಯ ಹಸಿರು ಅಂಗಿಗಳನ್ನು ಹಾಕಿಕೊಂಡು ಜಂಭ ಪಡುತ್ತಿದ್ದವು. ಹಸಿರಿನಲ್ಲಿಯೇ ನೂರು ನಮೂನೆಗಳು. ನದಿಗಳೊ... ಒಮ್ಮೆ ಮೃದುವಾದ ತಂತಿವಾದ್ಯದ ಸಗರಿಗಮಾ... ಗರಿಸ... ಸಂಗೀತದಂತೆ ಹರಿದರೆ, ಮತ್ತೆ ತರಿಕಿಟ... ತಕಿಟ ಎಂಬಂತೆ ಚೆಂಡೆಯ ಲಯಧ್ವನಿಯನ್ನು ಹೊಮ್ಮಿಸಿ ಹರಿಯುತ್ತಿದ್ದವು. ಮನಸ್ಸಾದರೆ ಡೋಲಿನ ಏರುಧ್ವನಿಯಲ್ಲಿ ಹರಿದು ರಂಪಾಟದಂತೆ ತೋರಿ ನಗಾರಿ ಧ್ವನಿಯನ್ನೂ ಮೀರಿ ಸದ್ದು ಮಾಡುತ್ತಿದ್ದವು.

ಇಂತಹ ಮಳೆಗಾಲವೆಂಬ ಸಾಮ್ರಾಜ್ಯದ ಮಹಾರಾಣಿಯೇ ಮಳೆಮಾಯಿ. ಆಕೆ ಚಿಗರೆಗಣ್ಣಿನ ಲಲನೆಯಲ್ಲ. ರವಿವರ್ಮನ ಚಿತ್ರಪಟದಂತೆ ಪ್ರೌಢಕಳೆಯ ತುಂಬು ಚೆಲುವೆ. ನಿಧಾನ ನಡಿಗೆಯ ಗಾಂಭೀರ್ಯದಲ್ಲಿ ಅವಳು ಋತುಮಾನವೆಂಬ ಚಕ್ರಾಧಿಪತ್ಯವನ್ನು ಆಳುತ್ತಿದ್ದಳು.

ಹೀಗೆ ಋತುಮಾನದ ಸಾರ್ವಭೌಮತೆಯಲ್ಲಿ ವಾತಾವರಣ ಕೂಡ ಮಳೆಗಾಲಕ್ಕೇ ಶರಣಾಗಿಬಿಡುತ್ತಿತ್ತು. ಹೂವುಗಳೆಲ್ಲಾ ಅರಳಿ ಮಳೆಮಾಯಿಗೆ ಶರಣಾಗುತ್ತಿದ್ದವು. ಭಾರೀ ಹನಿಗಳಿಗೆ ಸಾಧ್ಯವಾದಷ್ಟು ದಳವೊಡ್ಡಿ ನಿಲ್ಲುತ್ತಿದ್ದವು. ಹನಿಗಳೆಡೆಯಲ್ಲಿ ಅರಳುವ ಚಿಕಣಿ ಹೂಗಳು, ಧಾರೆನೀರಿಗೂ ಬಾಡದ ಜಕ್ಕಣಿ ಹೂಗಳು. ಕಂಪಿರುವ ಹೂಗಳು, ಕಮಟು ವಾಸನೆಯ ಹೂಗಳು, ಮತ್ತೇರಿಸುವ, ಗುಂಗು ಹಿಡಿಸುವ ಹೂರಾಶಿಗಳು. ಮಳೆ ಬಿಡುವು ಕೊಟ್ಟಾಗ ಮಾತ್ರ ಮಾಯಗಾರನಂತೆ ಅರಳುವ ಜಾದೂ ಹೂಗಳು... ಹೀಗೆ ನಮೂನೆಗಳೆಷ್ಟೊ ಲೆಕ್ಕವಿಟ್ಟವರಾರು. ಅದೇನೇ ಇರಲಿ. ಮಳೆಯ ಸೊಗಸು ಮುಗಿದು ಬೇಸಿಗೆ ಬಂತೆಂದರೆ ಮತ್ತೆ ಭೂಮಿಗೆ ಬಲು ಬೇಜಾರು ಬರುತ್ತಿತ್ತು. ಆರಂಭದಲ್ಲಿ ರವಿಕಿರಣಗಳ ನೇವರಿಕೆ ತುಸು ಬೆಚ್ಚನೆ ಎನಿಸಿದರೂ ಮತ್ತೆ ಮತ್ತೆ ಎಷ್ಟೂಂತ ಈ ಬಿಸಿಲ ರಾಶಿಯನ್ನು ಸಹಿಸಿಕೊಳ್ಳುವುದು. ಜೋರು ಮಳೆ ಸುರಿದರೆ ನೀರು ಹರಿದು ಹೋಗಿ ಸೇರಲು ಸಮುದ್ರವಿದೆ. ಆದರೆ ಜೋರಾಗಿ ಸುರಿವ ಬಿಸಿಲ ರಾಶಿಯನ್ನು ಒಂದೆಡೆ ಪೇರಿಸಲು ಏನಾದರೂ ತಾವು ಇದೆಯೇ... ಎಲ್ಲವನ್ನೂ ಭೂಮಿಯಮ್ಮನೇ ನುಂಗಬೇಕು. ಚಳಿಗಾಲವಂತೂ ಬೇಸಿಗೆ ಮತ್ತು ಮಳೆಗಾಲದ ಗಾಢ ಪ್ರಭಾವದಲ್ಲಿ ಮಂಕಾಗಿ ನಡುವೆ ಸಂದು ಹೋಗುತ್ತಿದ್ದುದರಿಂದ ಭೂಮಿಯಮ್ಮನಿಗೆ ಏನೂ ಸಹಾಯ ಆಗುತ್ತಿರಲಿಲ್ಲ. ಸಾಕಾಗಿ ಹೋಯಿತು ಅವಳಿಗೆ.

ಭೂಮಿಯಮ್ಮನ ಈ ಬೇಜಾರು ಕಂಡು ಹೂವುಗಳ ಲೋಕದ ಒಡೆಯ ಪುಷ್ಪರಾಜ ಒಮ್ಮೆ ಆಕೆಯ ಕುಶಲ ವಿಚಾರಿಸಿದ. ಬೆವರು ಒರೆಸಿಕೊಳ್ಳುತ್ತ ಭೂಮಿಯಮ್ಮ, ಈ ಸೂರ್ಯಕಿರಣಗಳಿಂದ ಸುಸ್ತಾಗುತ್ತಿರುವುದಾಗಿ ಕಷ್ಟ ಹೇಳಿಕೊಂಡಳು. ಆಗ ಪುಷ್ಪರಾಜನಿಗೊಂದು ಯೋಚನೆ ಹೊಳೆಯಿತು. ಹೂವರಳುವ ಕಾಯಕವನ್ನು ಮಳೆಗಾಲಕ್ಕೆ ಬದಲಾಗಿ ಬೇಸಿಗೆಯಲ್ಲಿ ಹಮ್ಮಿಕೊಂಡರೆ ಹೇಗೆ...

ಪುಷ್ಪರಾಜ ತನ್ನವರನ್ನೆಲ್ಲ ಕರೆದು ಆಜ್ಞಾಪಿಸಿದ. "ನೋಡಿ ಹೂಗಿಡಗಳೆ, ಇನ್ನುಮುಂದೆ ನೀವೆಲ್ಲಾ ಬೇಸಿಗೆಯಲ್ಲಿಯೇ ಅರಳಬೇಕು. ಬೇಸಿಗೆಯಲ್ಲಿ ಭೂಮಿಯಮ್ಮ ತುಂಬ ಬಳಲಿರುತ್ತಾಳೆ. ನಮಗೆಲ್ಲ ಆಧಾರವಾಗಿರುವ ಭೂಮಿಯಮ್ಮನಿಗೆ ನಾವು ಸ್ವಲ್ಪವಾದರೂ ಸಂತೋಷವನ್ನು ಮೂಡಿಸಬೇಕು'' ಎಂದು ಆದೇಶಿಸಿದ.

ಅಂದಿನಿಂದ ಹೂವುಗಳೆಲ್ಲ ಬೇಸಿಗೆಯಲ್ಲಿ ಅರಳಲು ಶುರುವಾದವು. 'ಹೂ ತುಂಬಿದ ಮರದ ನೆರಳು ಹೂವಿಗಿಂತ ಹಗುರ' ಎಂದು ಭೂಮಿಯಮ್ಮ ನಕ್ಕಳು.